

ಕಲೆಸಿದ ಔಷಧಿ ಹೇಳಿದ್ದ. ನಮಗೆ ಆರಾಮು ತಪ್ಪಿದಾಗ, ಕಾರ್ಕೋಟಕ ವಿಷವೇನೋ ಎಂಬಷ್ಟು ಕಹಿಯಿರುವ ತಪ್ಪಲ, ಬೇರುಗಳನ್ನು ಅರುದು ಒಲ್ಲೆ ಒಲ್ಲೆ ಅಂತ ವೈಕಂಡು ಒದ್ದಾಡುತ್ತಿದ್ದರೂ ಕೇರು ಮಾಡದೆ ಕೆಡವಿ ಹಾಕಿ ಮೂಗುಮುಚ್ಚಿ ಬಾಯಿಯೊಳಗೆ ಸುರುವಿಬಿಡ್ತಿದ್ದ. ವಯಕ್ ವಯಕ್ ಅಂತ ವಾಂತಿ ಮಾಡಿಕೊಳ್ಳಲು ಹೋದ್ರೆ ಪಡಾ ಅಂತ ಹಿಂದ ಮುಂದ ನೋಡ್ದಾರ್ದ ಕಪಾಳಕ್ಕ ಬುಡುತಿದ್ದ. ಅಕ್ಕಡಿಲಿಂದ ಅಮ್ಮನೂ ಬುಡ್ತಿದ್ದಳು. ಅಂತೂ ಅದನ್ನು ನುಂಗಿದ ಮೇಲೆ ತಾತ ನಮಗೆ ಆ ಕಹಿ ಕಡಿಮೆಯಾಗಲಿಕ್ಕೋ ಏನೋ ಪೆಪ್ಪರ್‌ಮಿಠಾಯಿ ಕೊಡ್ತಿದ್ದ. ಅಮ್ಮ ಆತನ ಕಾಲಿಗೆ ಸಣಮಾಡಿದ ಮೇಲೆ ನಮ್ಮ ಸರದಿ. ಇದು ಯಾವತ್ತಿನ ಪರಿಪಾಠ. ಇಂತಪ್ಪ ಭೀಮಪ್ಪ ನಮ್ಮನೀಗೆ ಗಾದಿ ಇಳಿಸಿ ಸೀದಾ ಹೋದವನೇ, “ಅವುನಿಗಾದ್ರೆ ಗಾದಿ ಕೊಟ್ರೆ ಸರ್. ಮತೆ ನನಗ ಸೈಕಲ್ ಮ್ಯಾಲೆ ಮನಸಾಗಿತ್ತು” ಅಂತ ಕೇಳೇಬಿಡೋದೆ?

‘ಆಯ್ತೇಳೊ... ಊರಿಗೆ ಹೋಗಾ ದಿವಸನ್ನ ಬರಲಿ’ ಅನ್ನಬಹುದಾಗಿದ್ದವರು ಹಾಗನ್ನದೆ, ಸೀದಾ ಒಳಗೆ ಹೋಗಿ ಕೀಲಿ ತೆಗೆದುಕೊಂಡು ಬಂದವರೇ “ಒಯ್ಯಿ. ಈಗಿನಿಂದೇ ಇದು ನಿಂದು” ಅಂದಾಗ ಭೀಮಪ್ಪ ತಲೆಕೆಳಗೆ ಕಾಲುಮೇಲೆ ಆಗಿ, “ದೇವರು ಲಕ್ಷಕ್ಕೊಬ್ಬರನ್ನ ಹುಟ್ಟಸ್ತಾನ ಸಾಹೇಬ್ರೆ ನಿಮ್ಮಂಥವ್ರನ್ನ. ಸುಮ್ನೆ ಮಾತಿಗೆ ಕೇಳಿದ್ದೆ. ಬ್ಯಾಡ” ಅಂದು ಹಿಂದೇಟು ಹಾಕಿದರೂ ಕೇಳದ್ದಕ್ಕೆ ಸೈಕಲ್ ಭೀಮಪ್ಪನದಾಯಿತು.

ಆಗಿನಿಂದ ಆತ ಸೈಕಲ್ ತಾತ.

ಮನೆ ಮುಂದೆ ಸೈಕಲ್ ನಿಂತಿದೆಯಂದ್ರೆ ಆವತ್ತು ಎರಡಲ್ಲೊಂದು ಜರುಗಲೇಬೇಕು – ಯಾವುದೋ ಔಷಧಿಯ ಕಹಿರಸ ಪ್ರಾಶನ ಅಥವಾ ಕೊರಳಿಗೊಂದು ಮುಗುದಾಣಿಯಂಥ ತಾಯಿತ ಧಾರಣ. ಬೆಳೆಯುತ್ತ ನನ್ನೊಳಗೆ ಇದ್ದ ಸೈಕಲ್ ತಾತನೆಡೆಗಿನ ಅಸಹನೆಯು ನಿಧಾನವಾಗಿ ಪಡೆದುಕೊಂಡದ್ದು ದ್ವೇಷದ ರೂಪ. ಹತ್ತನೇ ತರಗತಿಯಲ್ಲಿ ಅತಿ ಹೆಚ್ಚು ಅಂಕ, ಪಿಯುಸಿಯಲ್ಲಿ ಸೈನ್ಸ್ ವಿಭಾಗದ ಆಯ್ಕೆ, ಬಿ.ಎಸ್ಸಿ. ಹೊತ್ತಿಗೆ ಸೇರಿಕೊಂಡ ಲೇಖಕನ ಅಸ್ಮಿತೆಗಳು ಕೂಡಿಕೊಂಡು ಆ ದ್ವೇಷವು ಧರಿಸಿದ್ದು ತಾತ್ಸಾರದ ಮೇಲಂಗಿ. ನಿರಕ್ಷರಕುಕ್ಷಿಯಾದ ಆತನ ಜ್ಞಾನವೆಲ್ಲ ಆಧಾರ ರಹಿತವಾದುದೆಂಬ, ಆತನ ಪಾರಂಪರಿಕ ವೈದ್ಯಪರಿಣಿತಿಯು ಯಾರದೋ ಎರವಲಿನ ರೂಕ್ಷ ಅನುಕರಣೆಯೇ ಹೊರತು ಬೇರೇನಲ್ಲವೆಂಬ, ಅಂತ್ರಮಂತ್ರ ಜ್ಯೋತಿಷ್ಯ ಭವಿಷ್ಯ ಹಸ್ತಸಾಮುದ್ರಿಕೆಗಳೆಲ್ಲ ಗೊಡ್ಡು ಮೂಢನಂಬಿಕೆಗಳೆಂಬ ಭಾವಗಳು ಬಲಗೊಂಡ ಪರಿಣಾಮ ನಾನಾತನನ್ನು ಈಗೀಗ ಕೇರೇ ಮಾಡುತ್ತಿರಲಿಲ್ಲ. ಅಮ್ಮನ ಮನಸ್ಸು ನೋಯಿಸಬಾರದೆಂಬ ಒಂದೇ ಉದ್ದೇಶಕ್ಕೆ ಸುಮ್ಮನೆ ಸಹಿಸಿಕೊಳ್ಳುತ್ತಿದ್ದೆನಾಗಲೀ ಬಾಲ್ಯಕಾಲದಲ್ಲಿದ್ದ ಗೌರವವು ಕರಗಿ ಕಾಲವೇ ಆಗಿತ್ತು.

ಹಿಂದೆ ಪಿಯುಸಿ ಓದುತ್ತಿದ್ದಾಗ ಇನ್ನೊಬ್ಬ ಯಾರೋ ತಾತ ಬಂದಿದ್ದ. ಬಂದವರ ಮುಂದೆಲ್ಲ ನಮ್ಮ ಕೈಯೊಡ್ಡಿಸಿ ಅವರು ಹೇಳುವ ಒಳ್ಳೆಯ ಮಾತುಗಳಿಗಾಗಿ ಹಂಬಲಿಸುವುದು ಅಮ್ಮನ ದೌರ್ಬಲ್ಯ. ಬಡತನಕ್ಕೆ ನಂಬಿಕೆಯೇ ಶಕ್ತಿ. ಅಮಾಯಕತೆಯೇ ದೌರ್ಬಲ್ಯ. ಆ ವರ್ಗದಲ್ಲಿ ಅವಳೂ ಒಬ್ಬಳು. ಆತ ನನ್ನ ಕೈ ನೋಡಿ, ಅಡ್ಡಡ್ಡ ತಲೆಯಾಡಿಸಿ, “ಉಹ್ಞೂಂ ಹುಡುಗಗ ವಿದ್ಯೆನೇ ಬರ್ದಿಲ್ಲಮ್ಮ ದೇವರು” ಅಂದ. ಅಮ್ಮ ಚಿಂತಿತ ಮುಖಭಾವದಲ್ಲಿ ಆತನನ್ನು ನೋಡುತ್ತಿರುವಾಗಲೇ ಬಿಟ್ಟ ಬಾಣದಂತೆ ಒಳಹೋಗಿ ನನ್ನ ಎಸ್ಸೆಸ್ಸೆಲ್ಸಿ ಮಾರ್ಕ್ಸ್‌ಕಾರ್ಡ್ ತಂದು ಆತನ ಮೂತಿಗೆ ಹಿಡಿದಿದ್ದೆ. ಎಕ್ಸಾಂ ಸೆಂಟರಿಗೇ ಹೈಯೆಸ್ಟ್ ಮಾರ್ಕು ಪಡೆದು ಬೋರ್ಡ್ ಮೇಲೆ ಹೆಸರು ಮೂಡಿಸಿದ ಅಹಂ ಅದು. ಉದ್ರಿ ಉಪರಾಟಿಯವರ ಮಾತು ಕೇಳಿಸಿಕೊಂಡು ತಲೆಹಾಕಲು ಅಮ್ಮ ಅಲ್ಲ ನಾನು ಎಂದು ಒಳಗಿಂದ ಉಕ್ಕಿ ಬರುವ ಸೊಕ್ಕು. ಹೇಗಾದರೂ ಮಾಡಿ, ಎಂದಾದರೂ ಒಂದು ದಿನ ಥೇಟು ಹೀಗೆಯೇ ಪುರಾವೆ ಸಮೇತ ಸೈಕಲ್ ತಾತನ ಪೊಳ್ಳುತನವನ್ನು ಅಮ್ಮನಿಗೆ ಮನವರಿಕೆ ಮಾಡಿ ಈ ಮೌಢ್ಯದ ದಾಸ್ಯದಿಂದ